**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ</u>**

<u>ಸಿ.ಸಿ. ನಂ.31/2017</u>

CW-8/PW-3

| | | |
|---|---|---|
| ಹೆಸರು | :- | ನರಸಿಂಹಮೂರ್ತಿ |
| ತಂದೆ ಹೆಸರು | :- | ಲೇಟ್ ಮಾಣಿಕ್ಯಂ |
| ವಯಸ್ಸು | :- | 53 ವರ್ಷ |
| ವೃತ್ತಿ | :- | ಪಿ.ಎಸ್.ಐ., ಬಿಡದಿ ಪೊಲೀಸ್ ಠಾಣೆ |
| ವಾಸ ಸ್ಥಳ | :- | ಬಿಡದಿ |
| ದಿನಾಂಕ | :- | 26-06-2025 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ನಾನು ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ 2017-18 ರ ಅವಧಿಯಲ್ಲಿ ಮುಖ್ಯ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 31.01.2017 ರಂದು ರವಿಶಂಕರ್ ಗುರೂಜಿ ಆಶ್ರಮದ ಹಿಂದೆ ಐದಾರು ಜನರು ದಾರಿಹೋಕರನ್ನು ದರೋಡೆ ಮಾಡಲು ಹೊಂಚು ಹಾಕುತ್ತಿದ್ದಾರೆ ಎಂಬ ಮಾಹಿತಿ ಚಾಸಾ-14 ರವರಿಗೆ ಬಂದಿದ್ದು, ಅವರು ನಮಗೆ ಮಾಹಿತಿ ತಿಳಿಸಿದಾಗ ನಾನು, ಚಾಸಾ-2, ಚಾಸಾ-3, ಚಾಸಾ-9 ರಿಂದ ಚಾಸಾ-12 ರವರು ನಮ್ಮ ಇಲಾಖಾ ವಾಹನದಲ್ಲಿ ಸ್ಥಳಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ, ಪರಿಶೀಲಿಸಿ ನೋಡಿದಾಗ ಅಲ್ಲಿ ಆರು ಜನರಿದ್ದು, ಅವರ ಪೈಕಿ ಒಬ್ಬನ ಕೈಯಲ್ಲಿ ಲಾಂಗು, ಇಬ್ಬರ ಕೈಯಲ್ಲಿ ದೊಣ್ಣೆ, ಮತ್ತೊಬ್ಬನ ಕೈಯಲ್ಲಿ ಖಾರದ ಪುಡಿ

ಪೊಟ್ಟಣ ಇತ್ತು. ಅವರು ದಾರಿಹೋಕರನ್ನು ದರೋಡೆ ಮಾಡುವ ಉದ್ದೇಶದಿಂದ ಹೊಂಚು ಹಾಕುತ್ತಿದ್ದರು. ನಾವು ಆ ಆರು ಜನ ಆಸಾಮಿಗಳನ್ನು ಹಿಡಿಯಲು ದಾಳಿ ನಡೆಸಿ ಹಿಡಿಯಲು ಹೋದಾಗ ಮೂರು ಜನ ನಮ್ಮ ಕೈಗೆ ಸಿಕ್ಕಿರುತ್ತಾರೆ. ಮೂರು ಜನ ದೊಣ್ಣೆಗಳನ್ನು, ಖಾರದ ಪುಡಿಯ ಡಬ್ಬವನ್ನು ಬಿಸಾಕಿ ಬೈಕಿನಲ್ಲಿ ಹೊರಟುಹೋದರು. ಹಿಡಿದುಕೊಂಡ ವ್ಯಕ್ತಿಗಳ ಹೆಸರು, ವಿಳಾಸ ತಿಳಿದುಕೊಂಡೆವು. ಅವರ ಕೈಯಲ್ಲಿ ಲಾಂಗು, ಎರಡು ದೊಣ್ಣೆ, ಖಾರದ ಪುಡಿ ಪ್ಯಾಕೇಟ್, ಒಂದು ಪಲ್ಸರ್ ಬೈಕನ್ನು ಮಹಜರ್ ಮುಖಾಂತರ ಅಮಾನತುಪಡಿಸಿಕೊಂಡೆವು. ಮಹಜರನ್ನು ರಾತ್ರಿ 10.00 ರಿಂದ 11.00 ರವರೆಗೆ ಹೆಡ್‌ಲೈಟ್ ಮತ್ತು ಟಾರ್ಚ್‌ನ ಬೆಳಕಿನ ಸಹಾಯದಿಂದ ಮಾಡಿದೆವು. ಓಡಿ ಹೋದ ಮೂರು ಜನ ಆಸಾಮಿಗಳ ಹೆಸರು, ವಿಳಾಸ ಸಹ ತಿಳಿದುಕೊಂಡೆವು. ಜಪ್ತಿ ಮಾಡಿಕೊಂಡ ಮಾಲುಗಳು ಮತ್ತು ಮೂರು ಜನ ಆರೋಪಿತರ ಸಮೇತ ಠಾಣೆಗೆ ಬಂದೆವು. ಮಹಜರನ್ನು ನೋಡಿದರೆ ಗುರುತಿಸಬಲ್ಲೆ. ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿಪಿ-10 ಎಂದು ಗುರುತಿಸಿರುತ್ತೇನೆ. ವಶಕ್ಕೆ ಪಡೆದುಕೊಂಡು ಮಾಲುಗಳನ್ನು ನೋಡಿದರೆ ಗುರುತಿಸಬಲ್ಲೆ. ವಶಕ್ಕೆ ಪಡೆದ ಮೂರು ಜನ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.